ಮೈಸೂರು ವಿಶ್ವವಿದ್ಯಾನಿಲಯ
(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ'ಗ್ರೇಡ್ ಪಡೆದಿದೆ)
(ಎನ್.ಐ.ಆರ್.ಎಫ್–2024:ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 19ನೇ ಸ್ಥಾನ,ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ)

ತೋಟಗಾರಿಕಾ ವಿಭಾಗ
ಮಾನಸ ಗಂಗೋತ್ರಿ, ಮೈಸೂರು–570006

ನಂ.ಯುಜಿಡಿ–17/207/2025–26 ದಿನಾಂಕ 08–10–2025

# ಪ್ರಕಟಣೆ

ಈ ಮೂಲಕ ಸಮಸ್ತ ನಾಗರೀಕರಿಗೆ ತಿಳಿಸುವುದೇನೆಂದರೆ, ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕೆ ವಿಭಾಗದ ವ್ಯಾಪ್ತಿಗೊಳಪಟ್ಟ ಪ್ರದೇಶದಲ್ಲಿರುವ ಸಪೋಟ ಫಸಲಿನ ಟೆಂಡರ್ ಕಂ ಬಹಿರಂಗ ಮರುಹರಾಜು ಪ್ರಕ್ರಿಯೆಯನ್ನು **ದಿನಾಂಕ: 27–10–2025 ರಂದು ಬೆಳಿಗ್ಗೆ 11–00** ಗಂಟೆಗೆ ಮಾನಸಗಂಗೋತ್ರಿಯಲ್ಲಿರುವ ನರ್ಸರಿ ತೋಟದಲ್ಲಿ ಹರಾಜು ನಡೆಸಲಾಗುವುದು. ಸದರಿ ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ಇಚ್ಛಿಸುವವರು ಮುಂಗಡ ಹಣ ರೂ.10,000/–(ಹತ್ತು ಸಾವಿರ ರೂಪಾಯಿ)ಗಳ ನಗದನ್ನು ಠೇವಣಿಯನ್ನಾಗಿ ಹರಾಜು ಸ್ಥಳದಲ್ಲಿ ಪಾವತಿಸಿದ ನಂತರ, ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಬಿಡ್ ಮಾಡಬಹುದು. ಬಹಿರಂಗ ಹರಾಜಿನ ಯಶಸ್ವಿ ಬಿಡ್‌ದಾರರು ಹರಾಜಿನ ಪೂರ್ಣ ಹಣವನ್ನು ಸ್ಥಳದಲ್ಲೇ ಪಾವತಿಸತಕ್ಕದು.

**ಸಪೋಟ ಫಸಲಿನ ಮರಗಳು – 520**

ಈ ಬಗ್ಗೆ ಹೆಚ್ಚಿನ ವಿವರಗಳಿಗೆ ಸಹಾಯಕ ನಿರ್ದೇಶಕರು, ತೋಟಗಾರಿಕೆ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

**ಮೊಬೈಲ್ ಸಂಖ್ಯೆ: 8073028565, 9141215395**

ಸಹಾಯಕ ನಿರ್ದೇಶಕರು

ಸಹಾಯಕ ನಿರ್ದೇಶಕರು
ತೋಟಗಾರಿಕೆ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 006

ಸೂಚನಾ ಫಲಕದಲ್ಲಿ ಅಳವಡಿಸಲು ಕೋರಲಾಗಿದೆ

ಪ್ರತಿ:
1. ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಆಡಳಿತಾಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಕಾರ್ಯಪಾಲಕ ಅಭಿಯಂತರರು, ಮಾನಸಗಂಗೋತ್ರಿ, ಮೈಸೂರು.
5. ಭದ್ರತಾಧಿಕಾರಿಗಳು, ಇಂಜಿನಿಯರಿಂಗ್ ವಿಭಾಗ, ಮಾನಸಗಂಗೋತ್ರಿ, ಮೈಸೂರು.

# ಮೈಸೂರು ವಿಶ್ವವಿದ್ಯಾನಿಲಯ

(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ'ಗ್ರೇಡ್ ಪಡೆದಿದೆ)

(ಎನ್.ಐ.ಆರ್.ಎಫ್–2024:ರಾಜ್ಯ ಸಾರ್ವಜನಿಕ ವಿಶ್ವವಿದ್ಯಾನಿಲಯ ವರ್ಗದಲ್ಲಿ 19ನೇ ಸ್ಥಾನ,ವಿಶ್ವವಿದ್ಯಾನಿಲಯ ವರ್ಗದಲ್ಲಿ 54ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 86ನೇ ಸ್ಥಾನ)

**ತೋಟಗಾರಿಕಾ ವಿಭಾಗ**
**ಮಾನಸ ಗಂಗೋತ್ರಿ, ಮೈಸೂರು–570006**

---

## 2025–26ನೇ ಸಾಲಿನ ಸಪೋಟ ಫಸಲಿನ ಟೆಂಡರ್ ಕಂ ಬಹಿರಂಗ ಹರಾಜಿನ "ಷರತ್ತುಗಳು"

1. ಸಪೋಟ ಫಸಲುಗಳ ಟೆಂಡರ್ ಕಂ ಬಹಿರಂಗ ಮರು ಹರಾಜು ಜರುಗುವ ಮುಂಚಿತವಾಗಿ ಬಿಡ್‌ದಾರರು **ರೂ.10,000/–**(ಹತ್ತು ಸಾವಿರ ರೂಪಾಯಿಗಳು) ಇ.ಎಂ.ಡಿ. ಸಲ್ಲಿಸಿ ತಮ್ಮ ಹೆಸರನ್ನು ನೊಂದಾಯಿಸಿಕೊಳ್ಳತಕ್ಕದ್ದು.

2. ಹರಾಜಿನಲ್ಲಿ ಅಂತಿಮ ಬಿಡ್ ಮಾಡಿದವರು ಸ್ಥಳದಲ್ಲೇ ಹರಾಜಿನ ಪೂರ್ಣ ಹಣವನ್ನು ಸಂದಾಯ ಮಾಡತಕ್ಕದ್ದು.

3. ಸದರಿ ಹರಾಜಿಗೆ ಸಂಬಂಧಪಟ್ಟ ಮರಗಳ ಫಸಲುಗಳನ್ನು ಕೀಳುವಾಗ ಬೇರೆ ಯಾವುದೇ ಮರಗಳಿಗಾಗಲೀ ಅಥವಾ ವಿಶ್ವವಿದ್ಯಾನಿಲಯದ ಇನ್ನಾವುದೇ ಆಸ್ತಿಗಳಿಗೆ ಹಾನಿಯಾಗದಂತೆ ಎಚ್ಚರಿಕೆ ವಹಿಸುವುದು. ತಪ್ಪಿದ್ದಲ್ಲಿ ಅದರ ದಂಡವನ್ನು ಕಟ್ಟಿಕೊಡಬೇಕು.

4. ಟೆಂಡರ್ ಸಲ್ಲಿಸುವವರು ರೂ.10,000/–ಗಳಿಗೆ ಡಿ.ಡಿ.ಯನ್ನು ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಹೆಸರಿನಲ್ಲಿ ಪಡೆದು ಮುಚ್ಚಿದ ಲಕೋಟೆಯೊಂದಿಗೆ ದಿನಾಂಕ: 23–10–2025 ರ ಸಂಜೆ 5–00 ಗಂಟೆಯೊಳಗೆ ಸಹಾಯಕ ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ, ತೋಟಗಾರಿಕೆ ವಿಭಾಗ, ಮಾನಸಗಂಗೋತ್ರಿ, ಮೈಸೂರು–570006 ಇವರಿಗೆ ಸಲ್ಲಿಸತಕ್ಕದ್ದು.

5. ಹರಾಜಿನ ನಡಾವಳಿಗಳು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರ ಅಂಗೀಕಾರಕ್ಕೆ ಒಳಪಟ್ಟಿರುತ್ತದೆ. ಬಹಿರಂಗ ಹರಾಜಿನ ನಿಯಮಗಳು ಉಲ್ಲಂಘನೆಯಾದಲ್ಲಿ ಹರಾಜನ್ನು ರದ್ದು ಮಾಡುವ ಮತ್ತು ಮರು ವಿಲೇವಾರಿ ಮಾಡುವ ಅಧಿಕಾರವನ್ನು ವಿಶ್ವವಿದ್ಯಾನಿಲಯದ ಕುಲಸಚಿವರ ಆದೇಶಕ್ಕೆ ಒಳಪಟ್ಟಿರುತ್ತದೆ.

6. ಯಶಸ್ವಿ ಬಿಡ್ಡುದಾರರು ಮಾರಾಟ ತೆರಿಗೆ ಪಾವತಿಸುವುದು ಮತ್ತು ಆಧಾರ ಗುರುತಿನ ಚೀಟಿ, ಪ್ಯಾನ್‌ಕಾರ್ಡ್‌ಗಳ ಪ್ರತಿಯನ್ನು ನೀಡತಕ್ಕದ್ದು.

7. ಹರಾಜಿನಲ್ಲಿ ಫಸಲುಗಳನ್ನು ತೆಗೆದುಕೊಂಡವರು, ಅನುಮತಿ ಪಡೆದ ನಂತರ ಸದರಿ ಬಿಡ್ ಮಾಡಿದ ಫಸಲು ಹರಾಜು ಜರುಗಿದ ದಿನಾಂಕದಿಂದ ಒಂದು ವರ್ಷದ ಅವಧಿಗೆ ಮಾತ್ರ ಒಳಪಟ್ಟಿರುತ್ತದೆ.

8. ಯಶಸ್ವಿ ಬಿಡ್ಡುದಾರರು **ರೂ.200/–ಗಳ ಛಾಪಕಾಗದದಲ್ಲಿ** ಕರಾರು ಒಪ್ಪಂದವನ್ನು ಮಾಡಿಕೊಡುವುದು **ಮತ್ತು ಶೇಕಡ 5%** ರಷ್ಟು **ಬಿಡ್‌ನ ಭದ್ರತಾ ಠೇವಣಿಯ** ಮೊತ್ತವನ್ನು ಮುಂಗಡವಾಗಿ ಪಾವತಿಸುವುದು. ಅವಧಿ ಮುಗಿದ ನಂತರ ಮರುಪಾವತಿ ಮಾಡಲಾಗುವುದು.

9. ಬಿಡ್‌ದಾರರು ಕಪ್ಪುಪಟ್ಟಿಯಲ್ಲಿ ನಮೂದಾಗಿರಬಾರದು.

10. ಹೆಚ್ಚಿನ ವಿವರಗಳಿಗೆ:– ಸಹಾಯಕ ನಿರ್ದೇಶಕರು, ಮೈಸೂರು ವಿಶ್ವವಿದ್ಯಾನಿಲಯ, ತೋಟಗಾರಿಕಾ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ (ಕಛೇರಿ ವೇಳೆಯಲ್ಲಿ) ಖುದ್ದಾಗಿ ಸಂಪರ್ಕಿಸಬಹುದು.
    ಮೊಬೈಲ್ ಸಂಖ್ಯೆ: 8073028565 ಅಥವಾ 9141215395.

ಸಹಾಯಕ ನಿರ್ದೇಶಕರು
ತೋಟಗಾರಿಕೆ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 006